**ಚಾಸಾ-1 ಪ್ರಾಸಾ-1**

**3ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**

**ಬೆಂಗಳೂರು ನಗರ.**

**ಸಿಸಿ. 7609/2023**

| | |
|---|---|
| **ಸಾಕ್ಷಿದಾರರ ಹೆಸರು** | ಲಕ್ಷ್ಮಿ ನಾರಾಯಣ ಎನ್. |
| **ತಂದೆಯ ಹೆಸರು** | ಲೇಟ್. ನಂಜುಂಡಪ್ಪ, |
| **ವಯಸ್ಸು** | 48 ವರ್ಷ, |
| **ಉದ್ಯೋಗ** | ಟೀ ಕ್ಯಾಂಟಿನ್, ರೈಲ್ವೆ ಸ್ಟೇಷನ್ ಹತ್ತಿರ, |
| **ವಾಸ** | ಮಹಾಲಕ್ಷ್ಮಿ ಲೇಔಟ್, ಬೆಂಗಳೂರು. |
| **ಪ್ರಮಾಣೀಕರಿಸಿದ ದಿನಾಂಕ** | 12.03.2026. |

**ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

ಈ ಪ್ರಕರಣದ ಆರೋಪಿ ನನಗೆ ಗೊತ್ತು. ಅದೇ ರೀತಿ ಚಾಸಾ-2 ರಿಂದ 8 ರವರು ಸಹ ಗೊತ್ತು. ಈ ಪ್ರಕರಣದಲ್ಲಿ ನನಗೆ ಏನು ಗೊತ್ತಿಲ್ಲ. ನಾನು ಆರೋಪಿಯ ವಿರುದ್ದ ಯಾವುದೇ ದೂರನ್ನು ನೀಡಿರುವುದಿಲ್ಲ. ಸಾಕ್ಷಿಯು ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದೂರನ್ನು ನಿಪಿ.1 ಎಂದು, ಸಾಕ್ಷಿ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಮಹಜರ್ ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಮಹಜರ್ ನ್ನು ನಿಪಿ.2 ಎಂದು, ಸಾಕ್ಷಿ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಸದರಿ ಮಹಜರ್ ನ್ನು ಸಂಜೆ 04.15 ರಿಂದ 05.15 ವರೆಗೆ ಜರುಗಿಸಿದ್ದರು. ನಾನು ಪೊಲೀಸರ ಮುಂದೆ ಯಾವುದೇ ಮರು ಹೇಳಿಕೆಯನ್ನು ನೀಡಿರುವುದಿಲ್ಲ. ಸಾಕ್ಷಿಯು ತನ್ನ ಮರು ಹೇಳಿಕೆಯನ್ನು ಅಲ್ಲೆಗೆಳೆದಿದ್ದರಿಂದ ಸದರಿ ಹೇಳಿಕೆಯನ್ನು ನಿಪಿ.3 ಎಂದು ಗುರುತಿಸಲಾಯಿತು. ನನ್ನ ಮತ್ತು ಆರೋಪಿನ ನಡುವೆ ಹಣಕಾಸಿನ ವಿಚಾರದಲ್ಲಿ ಸಣ್ಣ ಪುಟ್ಟ ಮನಸ್ತಾಪ ಉಂಟಾಗಿದ್ದರಿಂದ ಪೊಲೀಸರು ತೋರಿಸಿದ ಎರಡು ದಾಖಲೆಗಳಿಗೆ ಸಹಿ ಮಾಡಿರುತ್ತೇನೆ ಮತ್ತು ನಿಪಿ.1 ರಿಂದ 3 ಗಳಲ್ಲಿರುವ ವಿಚಾರ ನನಗೆ ಗೊತ್ತಿಲ್ಲ. ಈ ಸಂಬಂದ ಪೊಲೀಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ.

**(ಈ ಹಂತದಲ್ಲಿ ಹಿ.ಸ.ಸ.ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಪರಿಶೀಲಿಸಿ ಅನುಮತಿ ನೀಡಲಾಯಿತು.)**

**ಪಾಟೀ ಸವಾಲು : ಹಿ. ಸ. ಸ ಅಭಿಯೋಜಕರವರಿಂದ :**

2018 ರಲ್ಲಿ ಆರೋಪಿಯು ನನ್ನನ್ನು ಪರಿಚಯ ಮಾಡಿಕೊಂಡು ನನಗೆ ರೈಲ್ವೆ ಇಲಾಖೆಯಲ್ಲಿ ಉನ್ನತ ಅಧಿಕಾರಿಗಳು ಗೊತ್ತು ಎಂದು ಹೇಳಿ ಚಾಸಾ-4 ರವರಿಗೆ ರೈಲ್ವೆ ಇಲಾಖೆಯಲ್ಲಿ ಟಿಸಿ ಕೆಲಸ

**ಚಾಸಾ-1 ಪ್ರಾಸಾ-1**

ಕೊಡಿಸುವುದಾಗಿ ನಂಬಿಸಿ ಹಂತ ಹಂತವಾಗಿ ರೂ.11ಲಕ್ಷ ಹಣ ಪಡೆದುಕೊಂಡು ರೈಲ್ವೆ ಇಲಾಖೆಯ ನಕಲಿ ಆದೇಶ ಪ್ರತಿಗಳನ್ನು ತಯಾರಿಸಿರುತ್ತಾನೆ ಎಂದರೆ ಸರಿಯಲ್ಲ. ಅದೇ ರೀತಿ ಚಾಸಾ-5 ಮತ್ತು 6 ರವರನ್ನು ಪರಿಚಯ ಮಾಡಿಕೊಂಡು ಚಾಸಾ-6 ರವರಿಗೆ ರೈಲ್ವೆ ಇಲಾಖೆಯಲ್ಲಿ ಅವರಿಗೂ ಸಹ ಟಿಸಿ ಕೆಲಸ ಕೊಡಿಸುವುದಾಗಿ ನಂಬಿಸಿ ಹಂತ ಹಂತವಾಗಿ ಅವರಿಂದಲೂ ಸಹ ರೂ.15ಲಕ್ಷ ಹಣವನ್ನು ಪಡೆದುಕೊಂಡು ಅವರಿಗೂ ಸಹ ನಕಲಿ ಆದೇಶದ ಪ್ರತಿಗಳನ್ನು ಕೊಟ್ಟು ನಾನು, ಚಾಸಾ-5 ಮತ್ತು ಚಾಸಾ-6 ರವರು ಆರೋಪಿಗೆ ಕೆಲಸ ಬಗ್ಗೆ ಕೇಳಿದಾಗ ನಮಗೆ ಸಬೂಬು ಹೇಳಿ ರೂ.4ಲಕ್ಷ ಹಣ ವಾಪಸ್ ಕೊಟ್ಟು ಉಳಿದ ಹಣವನ್ನು ವಾಪಸ್ ಕೊಡದೇ ನಂಬಿಕೆ ದ್ರೋಹ ಉಂಟು ಮಾಡಿರುತ್ತಾನೆ ಎಂದರೆ ಸರಿಯಲ್ಲ. ಆರೋಪಿಯು ನಕಲಿ ಆದೇಶದ ಪ್ರತಿಗಳನ್ನು ನೈಜವಾದವೂ ಎಂದು ಬಿಂಬಿಸಿ ಅವುಗಳನ್ನು ನಮಗೆ ನೀಡಿರುತ್ತಾನೆ ಎಂದರೆ ಸರಿಯಲ್ಲ. ಅದೇ ರೀತಿ ನಾವುಗಳು ಹಣವನ್ನು ವಾಪಸ್ ಕೊಡು ಎಂದು ಕೇಳಿದಾಗ ಆರೋಪಿಯು ನಮಗೆ ಜೀವ ಬೆದರಿಕೆಯನ್ನು ಹಾಕಿರುತ್ತಾನೆ ಎಂದರೆ ಸರಿಯಲ್ಲ. ಆರೋಪಿಯು ನಕಲಿ ಆದೇಶದ ಪ್ರತಿಗಳನ್ನು ತಯಾರು ಮಾಡಲು ಬಳಸಿದ ವಸ್ತುಗಳನ್ನು ನಾಶ ಮಾಡಿರುತ್ತಾನೆ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಬಗ್ಗೆ ಎಲ್ಲಾ ಗೊತ್ತಿದ್ದರು ನಿಪಿ.1 ರಂತೆ ದೂರನ್ನು ನೀಡಿದ್ದರೂ ಮತ್ತು ನಿಪಿ.2 ರಂತೆ ಚಾಸಾ-2 ಮತ್ತು 3 ರವರ ಸಮಕ್ಷಮ ನಾನು ತೋರಿಸಿದಂತೆ ಮಹಜರ್ ಕ್ರಮ ಜರುಗಿಸಿದ್ದರು ಎಂದರೆ ಸರಿಯಲ್ಲ. ನಿಪಿ.1 ರಿಂದ 3 ರ ವಿಚಾರಗಳು ನನಗೆ ಗೊತ್ತಿದ್ದರು ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಶ್ರೀ.ಸಿಎನ್ ಆರೋಪಿ ಪರ ವಕೀಲರಿಂದ ಪಾಟೀಸವಾಲು ಏನು ಇಲ್ಲ ಎಂದು ತಿಳಿಸಿರುತ್ತಾರೆ. ಆದ್ದರಿಂದ ಪಾಟೀಸವಾಲು ಏನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇದೆ**

**3ನೇ ಎ.ಸಿ.ಜೆ.ಎಮ್.ನ್ಯಾ.**
**ಬೆಂಗಳೂರು.**

**ಚಾಸಾ-1 ಪ್ರಾಸಾ-1**

Accused present.
Ld.Sr.APP present.
**CW-1 is present and examined as PW-1 and documents marked as Ex.P.1, 1a, 2 and 2a.**
Advocate for accused submits, there is no cross examination to make. Hence, cross of PW-1 is taken as nil.
Reissue witness summons to CW-4 to 6. Call on 16.03.2026.

III Addl.C.J.M, Bengaluru.